ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಮನಸ್ಸಿಗಿಂತ ವೇಗವಾದದ್ದು ಯಾವುದು ಸೀತಾಪತಿ?*



ಆಟೋ ಮೀಟರ್!

ಹಾಡ್ಯ ಬಿ. ಜಯಾನಂದ, ಮೈಸೂರು

*ಆರಕ್ಕೇರಿದ ಮೇಲೆ ಮೂರಕ್ಕೆ ಇಳಿಯದಿರಲು ಏನು ಮಾಡಬೇಕು?*

ಬೇರೆಯವರು ಐದಕ್ಕೂ ಏರದಂತೆ ನೋಡಿಕೊಳ್ಳಿ. ಕಾಲೆಳೆಯುವವರು ಇಲ್ಲದಿದ್ದರೆ ಸ್ಥಾನ ಭದ್ರ.

ಇಂದು, ತಿಪಟೂರು

*ಯಾರು ಯಾರು ನೀವು ಯಾರು? ಡುಂಡಿರಾಜರೋ, ಕೃಷ್ಣೇಗೌಡ್ರೋ?*

ಆ ಎರಡು ಹೆಸರಿನ ಕಾಂಬಿನೇಷನ್ – ಬಣ್ಣದಲ್ಲಿ ಕೃಷ್ಣ, ಆಕಾರದಲ್ಲಿ ದುಂಡು!

ಮಲ್ಲಿಕಾರ್ಜುನ. ಹ. ಬಗಲಿ, ಜತ್ತ

*ಲಕ್ಷ್ಮಿಯ ಕೋಶಕ್ಕೂ, ಸರಸ್ವತಿಯ ಕೋಶಕ್ಕೂ ಇರುವ ಅಂತರವೇನು?*

ಹೆಡ್ ಆದವನಿಗೆ ಲಕ್ಷ್ಮಿಯ ಕೋಶ; ಹೆಡ್ ಇದ್ದವನಿಗೆ ಸರಸ್ವತಿಯ ಕೋಶ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ರಾಮಾಯಣದಲ್ಲಿ ಪಾದುಕೆಗಳೇ ರಾಜ್ಯವಾಳಿದವು. ಆದರೆ ಈಗ ಇಷ್ಟು ಮಂದಿ ಇದ್ದರೂ ಆಳ್ವಿಕೆ ಅಸಾಧ್ಯವಲ್ಲ...?*



ಆ ಮುಖಂಡನ ಪಾದುಕೆ ಪೂಜೆಗೆ ಅರ್ಹ; ಈ ಮುಖಂಡ ಪಾದುಕಾಪೂಜೆಗೆ ಅರ್ಹ!

ಜಿ.ಅನಂತನಾರಾಯಣಸ್ವಾಮಿ, ತುಮಕೂರು

*ಗಂಗೆಯಲ್ಲಿ ಸ್ನಾನ ಮಾಡಿದರೆ ನಾವು ಮಾಡಿದ ಪಾಪಗಳ ಜೊತೆಗೆ ಮಾಡಿರಬಹುದಾದ ಪುಣ್ಯಗಳೂ ನಾಶವಾಗಬಹುದಲ್ಲವೆ?*

ಊಹೂಂ; ಪಾಪ ಕೊಳೆ; ಪುಣ್ಯ ಮಚ್ಚೆ!

ವಿಜಯಾ ಚನ್ನವೀರಪ್ಪ, ಹಿರೇಹಡಗಲಿ

*ತುಂಬಾ ಇಷ್ಟ ಪಟ್ಟಾಗ ಸಿಗೋದು ನೋವು. ತುಂಬಾ ನೋವಾದಾಗ ಸಿಗೋದು ತಿಳಿವಳಿಕೆ. ತುಂಬಾ ತಿಳುವಳಿಕೆ ಬಂದಾಗ?*

ಆ ತಿಳುವಳಿಕೆಯ ಯೋಗ್ಯತೆಗೆ ಅನುಗುಣವಾಗಿ ಶ್ರೀಶ್ರೀಶ್ರೀ ಅಥವಾ ಛೀಛೀಛೀ!

ಜಯಲಕ್ಷ್ಮಿ, ಕೂಜಪ್ಪಾಡಿ

*ಸರಳಜೀವನದ ಬಗ್ಗೆ ಉಪದೇಶ ನೀಡುವವರು ಆ ಸೂತ್ರವನ್ನು ತಮ್ಮ ಜೀವನದಲ್ಲಿ ಏಕೆ ಅಳವಡಿಸಿಕೊಳ್ಳುತ್ತಿಲ್ಲ?*

ಯತ್ನಿಸುತ್ತಾರೆ. ಆದರೆ ಕರ್ಮಣ್ಯೇವಾಧಿಕಾರಸ್ತೇ ಎನ್ನುವಷ್ಟರಲ್ಲಿ ಕಲ್ಲು, ಮಣ್ಣು, ಅಧಿಕಾರ, ರಸ್ತೆ ಕಂಟ್ರಾಕ್ಟ್‌ಗಳ ಕಡೆ ಗಮನ ಹೋಗಿಬಿಡತ್ತೆ!

ಜಯದೇವ. ಹಲಕಿ, ಗೋಕಾಕ

*ವೈಯಾರ್ ಭಟ್ಟರು ಕನ್ನಡದ ಸುಭಾಷ್ ಘಾಯ್. ನೀವೇನಂತೀರಿ?*

ಸು-ಭಾಷೆಗೆ ಗಾಯ ಅಥವಾ ಸುಭಾಷೆ ಗಾಯಬ್ ಮಾಡಿದವರು ಎಂದರೆ ಹೆಚ್ಚು ಸೂಕ್ತ!

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ

*ಆಲಿಂಗನ ಆರೋಗ್ಯಕರ; ಆದರೂ ಹಸ್ತಲಾಘವಕ್ಕೆ ಮಾತ್ರ ಕೈ ಚಾಚಿದಳಲ್ಲಾ...?*

ಹಸ್ತಲಾಘವಕ್ಕೇ ವಜ್ರದುಂಗುರ ಗಾಯಬ್! ಇನ್ನು ಆಲಿಂಗನವೂ ಆಗಿದ್ದಿದ್ದರೆ......ಛೆಛೆ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ ಮಠ

*ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು. ಆದರೆ ಕೆಲವರು ಮಾತ್ರ ಹೆಚ್ಚು ಬುದ್ಧಿವಂತರು. ಏಕೆ ಸಾರ್?*

ಸೃಷ್ಟಿಯ ತಪ್ಪಲ್ಲ. ಬುದ್ಧಿ ಹಿತ್ತಾಳೆಯಂತೆ. ಬಳಸದಿದ್ದರೆ ಕಿಲುಬು, ಕಲಾಯಿ ಮಾಡಿದರೆ ಹೊಳಪು.

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಬಾನಿನಷ್ಟು ವಿಸ್ತಾರವಾದ, ಭೂಮಿಯಷ್ಟು ವಿಶಾಲವಾದ, ಸಮುದ್ರದಷ್ಟು ಆಳವಾದ ವಸ್ತು ಯಾವುದು?*

ಬೆಂಗಳೂರಿನ ಗಾರ್ಬೇಜ್.

ಕುಮಾರ ಚಲವಾದಿ, ಹೊಳೆನರಸಿಪುರ

*ನಿಮ್ಮ ಪ್ರೇಯಸಿಯರ ಹೆಸರು ಕನವರಿಸಿ ತಲೆಯ ಮೇಲೆ ಮೊಟಕಿಸಿಕೊಂಡ ಅನುಭವ ನಿಮಗೂ ಆಗಿದೆಯೇ?*

ಹ್ಹ! ಅಲ್ಲೇ ನೀವು ಎಡವಿರುವುದು. ಹೆಂಡತಿ ಮಲಗಿದ ಮೇಲೆ ಮಲಗಿ, ಅವಳು ಏಳುವುದಕ್ಕೆ ಮುಂಚೆ ಎದ್ದರೆ ಈ ಪ್ರಾಬ್ಲಮ್ಮೇ ಇರಲ್ಲ!

## ಬಹುಮಾನಿತ ಪ್ರಶ್ನೆ

ಬೂಕನಕೆರೆ ವಿಜೇಂದ್ರ, ಮೈಸೂರು

*ಬಡವರಿಗೇಕೆ ಸ್ನೇಹಿತರಿರುವುದಿಲ್ಲ?*

ಬಡವರಿಗೇ ಸ್ನೇಹಿತರಿರುವುದು. ಶ್ರೀಮಂತರೊಡನೆ ಇರುವವರು ಶ್ರೀಮಂತರ ಸ್ನೇಹಿತರಲ್ಲ, ಶ್ರೀಮಂತಿಕೆಯ ಸ್ನೇಹಿತರು.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ವಯಸ್ಸು ಅರವತ್ತಾದರೂ ಬೇಲಿ ಹಾರುವವರಿಗೆ ನಿಮ್ಮ ಕಿವಿಮಾತು?*

ಒಳ್ಳೆಯ ಕುಷನ್ ಇರುವ ಷೂಸ್ ಬಳಸದಿದ್ದರೆ ಮಂಡಿ, ಪಾದ ಜಖಂ ಆದಾವು, ಎಚ್ಚರ!

ಎಚ್. ಡುಂಡಿರಾಜ್, ಮಂಗಳೂರು

*ಆತ್ಮವನ್ನು ಕತ್ತರಿಸಲು ಆಗದು, ಅದನ್ನು ಸುಡಲು ಸಾಧ್ಯವಿಲ್ಲ, ಆತ್ಮಕ್ಕೆ ಸಾವಿಲ್ಲ; ಹಾಗಾದರೆ ಆತ್ಮಹತ್ಯೆ ಎನ್ನುವುದು ಸರಿಯೆ?*

ಎಂಗತನ, ಎಂಗಿ, ಎಂಜಲು, ಎಟ್ಟಿತನ, ಎಡವುವಿಕೆ, ಎಡಬಿಡಂಗಿತನ, ಎಡರು, ಎಡವಟ್ಟು, ಎಣವಳಿಕೆ, ಎದ್ದಲಗಾಟ ಎಂಬ ಹತ್ತು ಎಗಳನ್ನು ಆತ್ಮಕ್ಕೆ ಉರುಫ್ ತನಗೆ ಮಾಡಿಕೊಂಡ ಎಂಬುದೇ ಆತ್ಮ ಹತ್ ಎ ಯ ನಿಜವಾದ ಅರ್ಥ!

ಎಂ.ಎ. ಕುಮಾರ್, ಬೆಂಗಳೂರು

*ಜಗತ್ತಿನಲ್ಲಿ ಚಿನ್ನ, ಕನ್ನಡಿ ಇವರೆಡೂ ಇಲ್ಲದಿದ್ದರೆ ಹೆಣ್ಣು ಹೇಗೆ?*




ಚಿನ್ನಕ್ಕೆ ಫೋಟೋಶಾಪ್ ಬಳಸುತ್ತಿದ್ದರು; ಕನ್ನಡಿಗೆ ಸೆಲ್ಫೀ.

ಎನ್. ಗೋಪಾಲರಾವ್, ಬೆಂಗಳೂರು

*ದಾನಕ್ಕೆ ಕರ್ಣ; ಸತ್ಯಕ್ಕೆ ಹರಿಶ್ಚಂದ್ರ; ಸುಳ್ಳಿಗೆ?*

ಮುಗ್ಧವಾದ, ಕೇಡಿಲ್ಲದ, ಪ್ರಿಯವಾಗುವ ಸುಳ್ಳಿಗೆ ಪುಟ್ಟ ಕೃಷ್ಣ – 'ಅಮ್ಮಾ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ....'

ಭಾರತಿ ಮಾನಗೆ, ಹೊನ್ನಾವರ

*ಸಾಮಾಜಿಕ ಜಾಲತಾಣಗಳಿಂದ ಅನುಕೂಲಕ್ಕಿಂತ ಅಪಾಯವೇ ಹೆಚ್ಚು. ಯಾಕೆ?*

ಅದು ಜಾಲತಾಣದ ತಪ್ಪಲ್ಲ. ಗಸಗಸೆಯನ್ನು ಪಾಯಸಕ್ಕೆ ಬದಲು ಅಫೀಮು ತಯಾರಿಸಲು ತೊಡಗುವ ಮನೋಧರ್ಮ.

■ ರಾಮ್